# ವಿಜ್ಞಾನ ಬೆಳೆಯುತ್ತಿದೆ, ಕಥೆಗಳ ಕೊರತೆಯಿದೆ



ಜಗತ್ತಿನ ಸಾಹಿತ್ಯದಲ್ಲಿ ವಿಜ್ಞಾನ ಕಥಾ ಸಾಹಿತ್ಯದ ಪ್ರಮಾಣ ಬಹಳ ದೊಡ್ಡದು. ಸೃಷ್ಟಿಯ ಅನೂಹ್ಯ ವಿಸ್ತಾರಗಳ ಬಗ್ಗೆ ಮನುಷ್ಯರ ಕುತೂಹಲ ಹೆಚ್ಚಿದಂತೆ, ಅದು ಅವರ ಭಾಷೆಗಳಲ್ಲಿ ಅದ್ಭುತ ಕಲ್ಪನೆಯಾಗಿ ಗರಿಗೆದರಿದೆ. ಅಲ್ಲದೆ ಬಹಳ ಜನಪ್ರಿಯವಾಗಿ ಭಾರೀ ಓದುಗ ವರ್ಗವನ್ನೇ ರೂಪಿಸಿಕೊಂಡಿದೆ. ಅದನ್ನು ಬರೀ ಕಲ್ಪನೆ ಎಂದೇನೂ ಕರೆಯುವುದಿಲ್ಲ; 'ಐಡಿಯಾಗಳ ಸಾಹಿತ್ಯ' ಎಂದೂ ಅದು ಜನಪ್ರಿಯವಾಗಿದೆ. ಆಧುನಿಕ ವಿಜ್ಞಾನದ ಬೆಳವಣಿಗೆಗಳು ಕಥನಕಲೆಯನ್ನು ಆಕರ್ಷಿಸಿ ಒಳ್ಳೆಯ ಕಥೆಕಾದಂಬರಿಗಳ ಹುಟ್ಟಿಗೆ ಕಾರಣವಾಗಿವೆ. ಅಷ್ಟು ಮಾತ್ರವಲ್ಲದೆ, 'ರವಿ ಕಾಣದ್ದನ್ನು ಕವಿ ಕಂಡ' ಎಂದು ಹೇಳುವಂತೆ, ವಿಜ್ಞಾನ ಕಥಾಲೇಖಕರು ಕೇವಲ ತಮ್ಮ ಕಲ್ಪನೆಯಲ್ಲಿ ಸೃಷ್ಟಿಸಿದ್ದ 'ಐಡಿಯಾ'ಗಳು ಮುಂದೊಮ್ಮೆ ನಿಜವಾದ ವೈಜ್ಞಾನಿಕ ಆವಿಷ್ಕಾರವಾಗಿ ಬಂದು ಜಗತ್ತಿನ ರೀತಿನೀತಿಯನ್ನು ಬದಲಾಯಿಸಿರುವ ಉದಾಹರಣೆಗಳೂ ಇವೆ. ಕಂಡದ್ದು ಕಾಣದ್ದು ಎರಡರ ಬಗ್ಗೆಯೂ ಬರೆಯಲು ತಮ್ಮ ಕಲ್ಪನೆಯ ಪುಷ್ಪಕ ವಿಮಾನವನ್ನು ಏರುವುದು ಸಾಹಿತಿಗಳಿಗೆ ಎಲ್ಲಿಲ್ಲದ ಸಂತೋಷ ಕೊಡುತ್ತದೆ.

ಕನ್ನಡದ ಆಧುನಿಕ ಸಾಹಿತ್ಯದಲ್ಲಿ ಕೂಡ 'ವಿಜ್ಞಾನ ಕಥಾ ಸಾಹಿತ್ಯ'ಕ್ಕೆ ಹೆಮ್ಮೆಯ ಪರಂಪರೆಯಿದೆ. ಅದನ್ನು 'ಮಯೂರ' ಬಳಗದ ಪತ್ರಿಕೆಗಳಂತೂ ನೀರೆರೆದು ಬೆಳೆಸಿವೆ. ಆಧುನಿಕ ಕಾಲ ಕಂಡ ಆವಿಷ್ಕಾರಗಳೆಲ್ಲವೂ ಕನ್ನಡದ ಕಲ್ಪನೆಯಲ್ಲಿ ಕಥೆಕಾದಂಬರಿಗಳಾಗಿ ಮರುಹುಟ್ಟು ಪಡೆದಿವೆ. ಹಲವರ ಕಲ್ಪನೆಯ ಗಗನನೌಕೆಗಳಿಗೆ 'ಮಯೂರ'ವೇ ಉಡಾವಣೆಯ ನೆಲೆಯಾಗಿತ್ತು. ಇತ್ತೀಚಿನ ವರ್ಷಗಳಲ್ಲಿ ವಿಜ್ಞಾನ ಕಥಾ ಸಾಹಿತ್ಯ ಅದೇಕೋ ಸೊರಗುತ್ತಿದೆ. ಅದನ್ನು ಜೀವಂತವಿರಿಸುವ ಪ್ರಯತ್ನಗಳಿಗೆ ಸದಾ ನಮ್ಮ ಬೆಂಬಲ ಇರುತ್ತದೆ. ವಿಜ್ಞಾನ ಕಥಾಬ್ರಹ್ಮ ರಾಜಶೇಖರ ಭೂಸನೂರಮಠ ಅವರೇ ರೂಪಾಂತರಿಸಿ ಮುಂದಿಟ್ಟ ಕಥೆಯೊಂದು ಈ ಸಂಚಿಕೆಯಲ್ಲಿದೆ. ಅದು ಕಲ್ಪನೆಯ ಹೊಸ ವಿಲಾಸಗಳಿಗೆ ಪ್ರೇರಣೆ ನೀಡಲಿ ಎನ್ನುವುದು 'ಮಯೂರ'ದ ಆಶಯ.

**–ಆರ್. ಪೂರ್ಣಿಮಾ**